ಈ) ಒಳಚರಂಡಿ ಯೋಜನೆಯು ಪ್ರಗತಿಯಲ್ಲಿರುವುದರಿಂದ, ಯಾವುದೇ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಿರುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

411(817) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಮಾಡಿದ ಖರ್ಚು ಎಷ್ಟು;

ಆ) ವೆಚ್ಚ ಮಾಡಲಾದ ಅನುದಾನ ಎಷ್ಟು ಹಾಗೂ ಖರ್ಚಾಗದೇ ಉಳಿದ ಅನುದಾನ ಎಷ್ಟು (ವರ್ಷವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಈ ಉದ್ಯಮದಿಂದ ಪ್ರತಿ ಪ್ರವಾಸ ಕೇಂದ್ರಕ್ಕೆ ಭೇಟಿ ನೀಡಿದ ದೇಶಿ, ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು; ರಾಜ್ಯದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು (3 ವರ್ಷದ ಮಾಹಿತಿ ನೀಡುವುದು);

ಈ) ಈ ಪ್ರವಾಸಿ ಕೇಂದ್ರಗಳಲ್ಲಿ ಇರುವ ಮೂಲಭೂತ ಸೌಕರ್ಯಗಳೇನು; ಕೊರತೆ ಇದ್ದಲ್ಲಿ, ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ರೂ. 5271.72 ಲಕ್ಷಗಳ ಯೋಜನೆಗೆ ಅನುಮೋದನೆ ನೀಡಿ ರೂ. 3869.74 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನ ರೂ. 3869.74 ಲಕ್ಷಗಳು ಈ ಪೈಕಿ ರೂ. 2552.26 ಲಕ್ಷಗಳು ಖರ್ಚಾಗಿರುತ್ತದೆ.

ರೂ. 1317.48 ಲಕ್ಷಗಳು ಖರ್ಚಾಗಬೇಕಾಗಿದೆ.

2007–08ರಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ರೂ. 99.66 ಲಕ್ಷಗಳು, ಶಿಕಾರಿಪುರ ತಾಲ್ಲೂಕಿಗೆ ರೂ. 10.00 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ.595.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2008–09ರಲ್ಲಿ ಶಿವಮೊಗ್ಗ ತಾಲ್ಲೂಕಿಗೆ ರೂ. 189.00 ಲಕ್ಷಗಳು, ಕೊಡಚಾದ್ರಿ ರಸ್ತೆಗೆ ರೂ. 1000.00 ಲಕ್ಷಗಳು, ಹೊಸನಗರ ತಾಲ್ಲೂಕಿಗೆ ರೂ.99.48 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ. 766.00 ಲಕ್ಷಗಳು ಸೊರಬ ತಾಲ್ಲೂಕಿಗೆ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2009–10ರಲ್ಲಿ ಶಿಕಾರಿಪುರ ತಾಲ್ಲೂಕಿಗೆ ರೂ. 101.77 ಲಕ್ಷಗಳು, ಶಿವಮೊಗ್ಗ ತಾಲ್ಲೂಕಿಗೆ ರೂ. 878.83 ಲಕ್ಷಗಳು, ಸಾಗರ ತಾಲ್ಲೂಕಿಗೆ ರೂ. 40.00 ಲಕ್ಷಗಳು, ಸೊರಬಾ ತಾಲ್ಲೂಕಿಗೆ ರೂ. 55.00 ಲಕ್ಷಗಳು ಹಾಗೂ ಹೊಸನಗರ ತಾಲ್ಲೂಕಿಗೆ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಕಳೆದ 3 ವರ್ಷದಿಂದ ರಾಜ್ಯಕ್ಕೆ ಭೇಟಿ ನೀಡಿದ ಪ್ರವಾಸಿಗರ ಅಂಕಿ ಅಂಶಗಳ ವಿವರಗಳು ಕೆಳಗಿನಂತಿವೆ.

ವರ್ಷ	ದೇಶೀಯ	ವಿದೇಶಿಯ
2007	37825953	534563
2008	37010928	520041
2009	32729679	229847

ಪ್ರವಾಸೋದ್ಯಮದಿಂದ ರಾಜ್ಯಕ್ಕೆ ಪರೋಕ್ಷವಾಗಿ ವಿವಿಧ ಮೂಲಗಳಿಂದ ಆದಾಯ ಬರುತ್ತಿದೆ.

ಈ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಇಲಾಖೆಗೆ ಮಾಹಿತಿ ಒದಗಿಸುತ್ತದೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಸೂಕ್ತ ಮೂಲಭೂತ ಸೌಕರ್ಯಗಳನ್ನು ಈ ತಾಣಗಳಿಗೆ ಇಲಾಖೆಯು ಕಲ್ಪಿಸಲು ಕ್ರಮ ವಹಿಸುತ್ತಿದೆ.

ಹಾಸನ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಶಾಸಕರಿಗೆ ನಿಗದಿಯಾದ ಅನುದಾನ

412(677) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಮಾನ್ಯ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ